## ‘ಮಿ. ಪರ್ಫೆಕ್ಟ್’ಗೆ ಬಹುಪರಾಕ್

‘ಯಾರಿವನು ಕನ್ನಡದವನು, ಯಾರಿವನು ನಮ್ಮೂರವನು, ಯಾರಿವನು ನಮ್ಮನೆ ಮಗನು...’ – ಇದು ‘ರಾಜಕುಮಾರ’ ಸಿನಿಮಾದ ಗೀತೆಗಳಲ್ಲೊಂದು. ಕಳೆದ ವಾರ ‘ಯುಟ್ಯೂಬ್’ನಲ್ಲಿ ಅನಾವರಣಗೊಂಡ ಈ ಗೀತೆಯನ್ನು ಲಕ್ಷಾಂತರ ಚಿತ್ರರಸಿಕರು ವೀಕ್ಷಿಸಿದ್ದಾರೆ. ಆ ಮೂಲಕ ‘ರಾಜಕುಮಾರ’ ಚಿತ್ರದ ದಿನಗಣನೆ ಶುರುವಾಗಿದೆ.

ಪುನೀತ್ ರಾಜಕುಮಾರ್ ಅಭಿನಯದ ‘ರಾಜಕುಮಾರ’ ಏಪ್ರಿಲ್‌ನಲ್ಲಿ ತೆರೆಕಾಣುವ ನಿರೀಕ್ಷೆಯಿದೆ. ರಾಜಕುಮಾರ್ ಹುಟ್ಟುಹಬ್ಬದ ಆಸುಪಾಸಿನಲ್ಲಿ ತೆರೆಕಾಣಲಿರುವ ಈ ಸಿನಿಮಾದ ನಿರ್ದೇಶನ ಸಂತೋಷ್ ಆನಂದರಾಮ್ ಅವರದು. ‘ಮಿಸ್ಟರ್ ಅಂಡ್ ಮಿಸೆಸ್ ರಾಮಾಚಾರಿ’ ಚಿತ್ರದ ಯಶಸ್ಸಿನ ಅಲೆಯನ್ನು ಎರಡನೇ ಚಿತ್ರದಲ್ಲೂ ಮುಂದುವರೆಸುವ ಪ್ರಯತ್ನ ಅವರದು. ಸದ್ಯ ಬಿಡುಗಡೆಯಾಗಿರುವ ‘ಯಾರಿವನು ಕನ್ನಡದವನು’ ಗೀತೆಯ ಸಾಹಿತ್ಯ ಸಂತೋಷ್ ಅವರದೇ. ‘ಮಿ. ಪರ್ಫೆಕ್ಟ್’ ಎಂದು ನಾಯಕನಿಗೆ ಬಹುಪರಾಕ್ ಹೇಳುವ ಈ ಹಾಡಿಗೆ ದೇವಿಶ್ರೀ ಪ್ರಸಾದ್ ಅವರು ಸಂಗೀತ ಸಂಯೋಜಿಸುವುದರ ಜೊತೆಗೆ ಸ್ವತಃ ಹಾಡಿದ್ದಾರೆ.

‘ರಾಜಕುಮಾರ’ ಸಿನಿಮಾ ಪುನೀತ್‌ರ ಇಮೇಜ್‌ಗೆ ತಕ್ಕಂತೆ ರೂಪುಗೊಂಡಿರುವುದು ಮಾತ್ರವಲ್ಲದೆ, ಭಾವನಾತ್ಮಕವಾಗಿ ಕೂಡ ಗಟ್ಟಿಯಾದ ಕಥೆ ಹೊಂದಿದೆ ಎನ್ನಲಾಗಿದೆ. ಪುನೀತ್ ಅಭಿಮಾನಿಗಳ ಜೊತೆಗೆ ಕೌಟುಂಬಿಕ ಪ್ರೇಕ್ಷಕರನ್ನೂ ಸೆಳೆಯುವ ಉದ್ದೇಶ ಚಿತ್ರತಂಡದ್ದು. ‘ರಾಜಕುಮಾರ’ ಎನ್ನುವ ಶೀರ್ಷಿಕೆ ಹಾಗೂ ಈಗಾಗಲೇ ಬಿಡುಗಡೆಯಾಗಿರುವ ಪೋಸ್ಟರ್‌ಗಳಲ್ಲಿ ರಾಜ್‌ರನ್ನು ನೆನಪಿಸುವಂತೆ ಪುನೀತ್ ಕಾಣಿಸಿಕೊಂಡಿರುವುದು ಕೂಡ ಸಿನಿಮಾ ಕುರಿತ ಕುತೂಹಲ ಹೆಚ್ಚಲು ಕಾರಣವಾಗಿದೆ.

ಪ್ರಿಯಾ ಆನಂದ್, ಶರತ್‌ಕುಮಾರ್, ಪ್ರಕಾಶ್ ರೈ, ಅನಂತನಾಗ್, ಅಚ್ಯುತಕುಮಾರ್, ರಂಗಾಯಣ ರಘು ಅವರಂಥ ಖ್ಯಾತನಾಮರು ‘ರಾಜಕುಮಾರ’ ಚಿತ್ರದ ತಾರಾಗಣದಲ್ಲಿದ್ದಾರೆ.



## ಇದು ಹುಡುಗಿಯರ ಜಮಾನ!

ಮುದ್ದುಮುದ್ದಾಗಿ ಕಾಣಿಸುವ ಹುಡುಗರನ್ನು ‘ಚಾಕೊಲೇಟ್ ಬಾಯ್’ ಎಂದು ಕರೆಯುವುದು ರೂಢಿ. ಇದೇ ಹೆಸರಿನ ಚಿತ್ರವೊಂದು ಕಳೆದ ವಾರ ಮುಹೂರ್ತ ನಡೆಸಿದೆ. ಈ ಚಿತ್ರದ ನಾಯಕ ಮುದ್ದು ಹುಡುಗ ಮಾತ್ರವಲ್ಲ, ಕೊಂಚ ಮೊದ್ದು ಕೂಡ ಇರುವಂತಿದೆ. ಏಕೆಂದರೆ, ಹುಡುಗಿಯರಿಂದ ಮೋಸ ಹೋಗುವ ಹುಡುಗನ ಕಥೆ ಇಲ್ಲಿಯದು.

ಮುತ್ತುಕುಮಾರ್ ನಿರ್ದೇಶಿಸುತ್ತಿರುವ ಈ ಚಿತ್ರದ ವಿದ್ಯಾಭರಣ್ ಕನ್ನಡ ಚಿತ್ರರಂಗಕ್ಕೆ ನಾಯಕರಾಗಿ ಪರಿಚಯಗೊಳ್ಳುತ್ತಿದ್ದಾರೆ.



ಸಿವಿಲ್ ಎಂಜಿನಿಯರಿಂಗ್ ಮುಗಿಸಿದ ನಂತರ, ಮಾಡೆಲಿಂಗ್‌ನಲ್ಲಿ ತೊಡಗಿಸಿಕೊಂಡಿದ್ದ ವಿದ್ಯಾ ಭರಣ್ ಈಗ ಸಿನಿಮಾದಲ್ಲಿ ಅದೃಷ್ಟ ಪರೀಕ್ಷಿಸಿಕೊಳ್ಳುತ್ತಿದ್ದಾರೆ. ಸೌಂದರ್ಯ ಸ್ಪರ್ಧೆಗಳಲ್ಲಿ ಬಹುಮಾನ ಕಿರೀಟ ಧರಿಸಿರುವ ಅವರು, ಚಿತ್ರದಲ್ಲಿ ಐವರು ನಾಯಕಿಯರ ಜೊತೆ ಕಾಣಿಸಿಕೊಳ್ಳುತ್ತಿದ್ದಾರೆ. ನಟಿಯರಾದ ಸಂಜನಾ, ವೈಷ್ಣವಿ, ಅದ್ವಿತಿ, ಅಭಿನಯಾ ಹಾಗೂ ಚಂದನಾ ಚಿತ್ರದ ಚೆಲುವನ್ನು ಹೆಚ್ಚಿಸುತ್ತಿದ್ದಾರೆ.

ಐವರು ನಾಯಕಿಯರನ್ನು ಚಾಕೊಲೇಟ್ ಹೆಸರುಗಳಲ್ಲಿಯೇ ಗುರ್ತಿಸಲು ನಿರ್ದೇಶಕರು ಉದ್ದೇಶಿಸಿದ್ದಾರೆ. ಹುಡುಗಿಯರಿಗೆ ಹುಡುಗರು ಮೋಸ ಮಾಡುವುದು ಹೆಚ್ಚು. ಆದರೆ, ಇತ್ತೀಚಿನ ದಿನಗಳಲ್ಲಿ ಹುಡುಗಿಯರೇ ಹುಡುಗರನ್ನು ವಂಚಿಸುತ್ತಿದ್ದಾರೆ ಎನ್ನುವ ಪ್ರಮೇಯ ನಿರ್ದೇಶಕರು.

ಈಗಾಗಲೇ ತಮಿಳು–ತೆಲುಗಿನಲ್ಲಿ ಕೆಲವು ಚಿತ್ರಗಳನ್ನು ನಿರ್ದೇಶಿಸಿರುವ ಮುತ್ತುಕುಮಾರ್, ಕನ್ನಡದಲ್ಲೂ ‘ಫ್ರೆಂಡ್ಲಿ ಬೇಬಿ’ ಎನ್ನುವ ಸಿನಿಮಾ ನಿರ್ದೇಶಿಸಿದ್ದಾರಂತೆ. ಇನ್ನೂ ತೆರೆ ಕಾಣ ಬೇಕಿರುವ ಆ ಚಿತ್ರದ ಥ್ರಿಲ್ಲರ್ ಕಥನ ಒಳಗೊಂಡಿದೆಯಂತೆ. ಬೆಂಗಳೂರು, ಮಡಿಕೇರಿ ಜೊತೆಗೆ ಥಾಯ್ಲೆಂಡ್‌ನಲ್ಲಿ ‘ಚಾಕೊಲೇಟ್ ಬಾಯ್’ ಚಿತ್ರೀಕರಣ ನಡೆಯಲಿದೆ.